ಶ್ರೀ

ಶ್ರೀ ಗುರುರಾಜೋ ವಿಜಯತೇ

# ಶ್ರೀ ರಾಘವೇಂದ್ರ ಗುರುಭಜನಂ

ಪಾಹಿ ಪಾಹಿ ರಾಘವೇಂದ್ರ ಗುರೋ । ತ್ರಾಹಿ ತ್ರಾಹಿ ಗುಣಸಾಂದ್ರ ಗುರೋ ।
ಕನಕ ಕಶ್ಯಪುತನಯಾಂಶ ಗುರೋ । ಜನಕಜಾಪತಿಪದಭಕ್ತ ಗುರೋ ।
ಮಧ್ವಮತಾಂಬುಧಿಸೋಮ ಗುರೋ । ಸದ್ವೈಷ್ಣವ ಪರಿಪಾಲ ಗುರೋ ।
ವ್ಯಾಸರಾಜಮೌನೀಂದ್ರ ಗುರೋ । ವಾಸುಕಿಶಯನನೊಲಿದ ಗುರೋ ।
ಸುಧೀಂದ್ರಸುಕುಮಾರಾಖ್ಯ ಗುರೋ । ಬುಧಾವಳೀಸಂಸೇವ್ಯ ಗುರೋ । ೧೦
ವರಮಂತ್ರಾಲಯಪುರದಿ ಗುರೋ । ಸುರಚಿರ ಮಂದಿರಗೈಯ್ದ ಗುರೋ ।
ತುಂಗಭದ್ರ ತಟವಾಸ ಗುರೋ । ಸಂಗೀತಪ್ರಿಯನಾದ ಗುರೋ ।
ಕಾವಿವಸ್ತ್ರ ಕರದಂಡ ಗುರೋ । ಭಾವಶುದ್ಧದಿ ಧರಿಸಿರ್ಪ ಗುರೋ ।
ತಪ್ತಮುದ್ರಧರದೇಹ ಗುರೋ । ಕ್ಲುಪ್ತ ಮೀರಿ ವರವೀವ ಗುರೋ । ೨೦
ಮೂಕನ ವಗ್ಮಿಯ ಗೈಯ್ದ ಗುರೋ । ಮಾಕಳತ್ರನ ನಿಜದಾಸ ಗುರೋ ।
ಕುಷ್ಠರೋಗ ಪರಿಹಾರ ಗುರೋ । ಶಿಷ್ಟಜನರ ಉದ್ಧಾರಿ ಗುರೋ ।
ಅಂಧಗೆ ಕಂಗಳನೀವ ಗುರೋ । ಮಂದಮತಿಗೆ ಜ್ಞಾನವೀವ ಗುರೋ ।
ಭೂತಪ್ರೇತ ಭಯನಾಶ ಗುರೋ । ತಾ ತರುಣಿಯೆ ಸಾಕ್ಷಿದಕೆ ಗುರೋ ।
ಸರ್ವರೋಗ ಪರಿಹಾರ ಗುರೋ । ಉರ್ವೀಸುರರಭಿಮಾನಿ ಗುರೋ । ೩೦
ಮಯಿಮತವನಕುಠಾರಿ ಗುರೋ । ವಾಯುಸುತಮತವಿಹಾರ ಗುರೋ ।
ಸರ್ವೇಶಪದಾಕ್ರಾಂತ ಗುರೋ । ಸರ್ವಾರಿಷ್ಟಕೃತಾಂತ ಗುರೋ ।
ಶೋಧಿಸಿ ಸಚ್ಛಾಸ್ತ್ರಾರ್ಥ ಗುರೋ । ಮೋದದಿ ಸುಲಲಿತ ಗೈಯ್ದ ಗುರೋ ।
ಮಧುವೈರಿಯ ನಿಜದಾಸ ಗುರೋ । ಸುಧೆಗೆ ಪರಿಮಳವನಿತ್ತ ಗುರೋ ।
ಕುಮತಿಗಳನು ನೀ ಗೆಲಿದೆ ಗುರೋ । ಸುಮತಿಗಳಿಗೆ ಬೋಧಿಸಿದೆ ಗುರೋ । ೪೦
ಹರಿನಿಂದಕರನು ಸದೆದೆ ಗುರೋ । ಹರಿಭಕುತರ ನೀ ಪೊರೆದೆ ಗುರೋ ।
ವೃಂದಾವನದೊಳು ನಿಂದ ಗುರೋ । ಚಂದ್ರಿಕಾರ್ಯ ರಾಘವೇಂದ್ರ ಗುರೋ ।
ಪಾಪಕದಲಿ ಮಾತಂಗ ಗುರೋ । ಶಾಪಾನುಗ್ರಹಶಕ್ತ ಗುರೋ ।
ರಾಮಪದಕಮಲಭೃಂಗ ಗುರೋ । ಈ ಮಹಿಯೊಳು ಪ್ರಖ್ಯಾತ ಗುರೋ ।
ಐದೊಂದರಿಗಳ ಗೆಲಿದೆ ಗುರೋ । ಐದೊಂದು ಶಾಸ್ತ್ರ ತಿಳಿಸುವ ಗುರೋ । ೫೦
ಶರಣರ ಪಾಲಿಪ ನಮ್ಮಗುರೋ । ಕರುಣಾಸಾಗರ ನೀನೆ ಗುರೋ ।
ತಾಮಸಮತಿಗಳ ಕಳೆವ ಗುರೋ । ರಾಮಪದಕಮಲಭೃಂಗ ಗುರೋ ।
ಎಂತಾದರೂ ಸ್ಮರಿಸುವರ ಗುರೋ । ಭ್ರಾಂತಿಜ್ಞಾನ ಪರಿಹರಿಪ ಗುರೋ ।
ಸಂಸಾರಾಬ್ಧಿಗೆ ಪೋತ ಗುರೋ । ಕಂಸಾಂತಕನಿಜಭಕುತ ಗುರೋ ।
ಯೋಗಾಭ್ಯಾಸಾಸಕ್ತ ಗುರೋ । ಭಾಗೀರಥಿಗಿತಭಕ್ತ ಗುರೋ । ೬೦
ಹರಿಸರ್ವೋತ್ತಮನೆನುತ ಗುರೋ । ಮೆರೆಸಿ ಡಂಗುರ ಹೊಯ್ಸಿರುವ ಗುರೋ ।
ವಾಯು ಜೀವೋತ್ತಮನೆನುತ ಗುರೋ । ಮಾಯಿಗಳಲಿ ಸ್ಥಾಪಿಸಿದ ಗುರೋ ।
ಗಣನೆಗೆ ಶಕ್ಯವೆ ಮಹಿಮೆ ಗುರೋ । ಮಣಿದು ನುತಿಪೆ ಪಾಲಿಪುದು ಗುರೋ ।
ನುಡಿಸಿದಂತೆ ನುಡಿಸಿರುವೆ ಗುರೋ । ಜಡಮತಿ ನಾನೇಂ ಬಲ್ಲೆ ಗುರೋ ।
ಬೇಡುವೆ ಸೆರಗೊಡ್ಡುತಲಿ ಗುರೋ । ನೀಡುವುದೆನಗಿದೆ ವರವ ಗುರೋ । ೭೦
ಜನುಮ ಜನುಮದೊಳಗೆನಗೆ ಗುರೋ । ನಿನ್ನ ನಾಮವ ಸ್ಮರಿಸುವುದ ಗುರೋ ।
ಹರಿಗುರುಗಳ ದೃಢಭಕುತಿ ಗುರೋ । ಕರುಣಿಸಿ ಕಾವುದು ಎಮ್ಮ ಗುರೋ ।
ಹನುಮನಯ್ಯನ ನಿಜದಾಸ ಗುರೋ । ಘನಕರುಣಾನಿಧಿಕಲ್ಪತರು ಗುರೋ ।

ಮಂಗಳ

ಜಯ ಮಂಗಳ ರಾಘವೇಂದ್ರ ಗುರೋ । ಶುಭ ಮಂಗಳ ರಾಘವೇಂದ್ರ ಗುರೋ ।
ಮಂಗಳ ಸದ್ಗುಣಸಾಂದ್ರ ಗುರೋ । ತುಂಗಾತೀರನಿವಾಸ ಗುರೋ ।

॥ ಶ್ರೀ ರಾಘವೇಂದ್ರ ಗುರುಭಜನಂ ಸಂಪೂರ್ಣಂ ॥

॥ ಶ್ರೀ ಕೃಷ್ಣಾರ್ಪಣಮಸ್ತು ॥

www.vijayadasaru.net